# 29ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
# ಬೆಂಗಳೂರು ನಗರ

ಸಿ.ಸಿ.ನಂ.52590ಃ2025

ಪಿಡಬ್ಲೂ.1 ದಿನಾಂಕ:27.03.2025

ಸಿಡಬ್ಲೂ.1 ಪ್ರಮಾಣೀಕರಿಸಲಾಯಿತು.

| | |
|---|---|
| ಹೆಸರು | ಮಂಜು |
| ಗಂಡನ ಹೆಸರು | ಲೇಟ್ ಕಗೆಂದರ್ ಕುಮಾರ್ |
| ವಯಸ್ಸು | 22 ವರ್ಷಗಳು |
| ಉದ್ಯೋಗ | ಮನೆ ಕೆಲಸ |
| ವಿಳಾಸ | ಕೋರಮಂಗಲ, ಬೆಂಗಳೂರು. |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತುಃ**

**ಮುಖ್ಯ ವಿಚಾರಣೆ ಹಿ.ಸ.ಸ.ಅ. ರವರಿಂದಃ-**

ಮೃತ ಕಗೇಂದರ್ ಕುಮಾರ್ ನನ್ನ ಯಜಮಾನರಾಗಬೇಕು. ಚಾಸಾ-2 ರಿಂದ 12 ರವರ ಪರಿಚಯ ಇದೆ. ದಿನಾಂಕಃ24.12.2024 ರಂದು ನನ್ನ ಯಜಮಾನರು ತೀರಿಕೊಂಡಿದ್ದಾರೆ. ಯಾರ ತಪ್ಪಿನಿಂದ ಮತ್ತು ಯವ ರೀತಿಯಲ್ಲಿ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಪೊಟೊಗಳನ್ನು ನಿಪಿ-2 ರಿಂದ ನಿಪಿ-13 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಹಿ.ಸ.ಸ.ಅ ರವರಿಂದ:**

ದಿನಾಂಕಃ24.12.2024 ರಂದು ಸಂಜೆ 4.00 ರಿಂದ 4.30 ರ ಸಮಯದಲ್ಲಿ ಚಾಸಾ-8 ಮತ್ತು ಮೃತ ನನ್ನ ಗಂಡ ರವರು ಈಜೀಪುರದ ಗುಡ್ಡಪ್ಪ ಗಾರ್ಡನ್ ರಸ್ತೆ, 5 ನೇ ಅಡ್ಡರಸ್ತೆ, ದಾಮಿ ರಾಮ್ ಬಿಲ್ಡಿಂಗ್ ನಂ.592 ಸಿ ಕಟ್ಟಡದ ಎರಡನೇ ಮಹಡಿಯಲ್ಲಿ ಇಟ್ಟಿದ್ದ ಕಬ್ಬಿಣದ ಪೈಪುಗಳನ್ನು ನೆಲದ ಮೇಲೆ ಇಳಿಸುವಂತೆ ಆರೋಪಿಯು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-8 ಮತ್ತು ಮೃತ

ನನ್ನ ಗಂಡ ಆರೋಪಿಗೆ ಕಬ್ಬಿಣದ ಪೈಪುಗಳು ಬಾರವಾಗಿದ್ದು, ನೇರವಾಗಿ ಕೆಳಕ್ಕೆ ಇಳಿಸಲು ಬರುವುದಿಲ್ಲ, ಪೈಪುಗಳನ್ನು ಕಟ್ಟಿ ಕೆಳಕ್ಕೆ ಇಳಿಸಲು ಹಗ್ಗವನ್ನು ಅಥವಾ ಸೂಕ್ತ ಸಲಕರಣೆಗಳನ್ನು ನೀಡುವಂತೆ ಕೇಳಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತನು ಈ ರೀತಿ ಸಲಕರಣೆಗಳನ್ನು ನೀಡಲು ಆಗುವುದಿಲ್ಲ ಒಬ್ಬರು ಮೇಲಿನಿಂದ ಪೈಪನ್ನು ಹಿಡಿದುಕೊಂಡು ಕೆಳಕ್ಕೆ ಬಿಡಿ, ಮತ್ತೊಬ್ಬರು ಕೆಳಗಡೆ ಪೈಪನ್ನು ಹಿಡಿದುಕೊಳ್ಳಲು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-8 ರವರು ಎರಡನೇ ಮಹಡಿಯಲ್ಲಿದ್ದ 20 ಅಡಿ ಉದ್ದದ ಕಬ್ಬಿಣದ ಪೈಪನ್ನು ತೆಗೆದುಕೊಂಡು ನೆಲದ ಮೇಲೆ ನಿಂತಿದ್ದ ಮೃತ ಕಗೇಂದ್ರ ಕುಮಾರ್ ರವರ ಕೈಗೆ ನೀಡಿದಾಗ ಸದರಿಯವರು ಹಿಡಿದುಕೊಂಡಿದ್ದ ಕಬ್ಬಿಣದ ಪೈಪ್ ಬ್ಯಾಲೆನ್ಸ್ ತಪ್ಪಿ ಅಲ್ಲಿಯೇ ಪಕ್ಕದಲ್ಲಿದ್ದ ಎಲೆಕ್ಟ್ರಿಕ್ ಕಂಬದಲ್ಲಿದ್ದ ಎಲೆಕ್ಟ್ರಿಕ್ ವೈರಿಗೆ ತಗುಲಿ ಕರೆಂಟ್ ಶಾಕ್ ಹೊಡೆದು ಎಡಗೈ ಅಂಗೈ ಮೇಲೆ ಹಾಗೂ ಬಲಗಾಲಿನ ಪಾದ ಮತ್ತು ಕಾಲಿನ ಮಧ್ಯದ ಬೆರಳಿನ ಮೇಲೆ ವಿದ್ಯುತ್‌ನಿಂದ ಸುಟ್ಟು ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಮೃತ ಕಗೇಂದ್ರ ಕುಮಾರ್ ರವರನ್ನು ತಕ್ಷಣ ಸೆಂಟ್ ಜಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅವರು 5.31 ಘಂಟೆ ಸಮಯಕ್ಕೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ನೆಲ ಮಹಡಿಯಿಂದ ಎರಡನೇ ಮಹಡಿಯವರೆಗೆ ಹೊಸ ಕಟ್ಟಡ ನಿರ್ಮಾಣ ಮಾಡಲು ಬಿಬಿಎಂಪಿ ಇಲಾಖೆಯಿಂದ ಅನುಮತಿಯನ್ನು ಪಡೆಯದೇ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾರೆ ಎಂದು ಚಾಸಾ-15 ರವರು ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಯು ಮೃತ ಕಗೇಂದ್ರ ಕುಮಾರ್ ಮತ್ತು ಚಾಸಾ-8 ರವರಿಗೆ ಯಾವುದೇ ಸುರಕ್ಷಿತ ಸಲಕರಣೆಗಳಾದ ಸೇಫ್ಟಿನೆಟ್ ಮತ್ತು ಸೇಫ್ಟಿ ಹಗ್ಗ ನೀಡದೇ ನಿರ್ಲಕ್ಷತನ ವಹಿಸಿದ್ದರಿಂದ ಆರೋಪಿತನ ಅಜಾಗರೂಕತೆಯಿಂದ ಮೃತ

ಕಗೇಂದ್ರಕುಮಾರ್ ರವರು ವಿದ್ಯುತ್ ಶಾಕ್ ತಗುಲಿ ಮೃತಪಟ್ಟಿದ್ದಾರೆ ಎಂದು ಈಗ ಓದಿ ಹೇಳಿದಂತೆ ನಾನು ಹಿಂದಿಯಲ್ಲಿ ಹೇಳಿದ್ದನ್ನು ಕನ್ನಡಕ್ಕೆ ತರ್ಜುಮೆಮಾಡಿ ನನಗೆ ಓದಿಹೇಳಿ ನಿಪಿ-1 ಕ್ಕೆ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಮೃತ ಕಗೇಂದ್ರಕುಮಾರ್ ರವರು ಆರೋಪಿತನ ನಿರ್ಲಕ್ಷತನದಿಂದ ಮೃತಪಟ್ಟಿದ್ದರೂ ಸಹ ಆರೋಪಿತನೊಂದಿಗೆ ಪ್ರಕರಣವನ್ನು ರಾಜಿಮಾಡಿಕೊಂಡಿದ್ದು, ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>.** ಇಲ್ಲ.

**<u>ಮರುವಿಚಾರಣೆ</u>**ಃ ಇಲ್ಲ

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸ.ಇದೆ**

**29ನೇ ಅ.ಮು.ನ್ಯಾ.ದಂ.ನ್ಯಾ,**
**ಬೆಂಗಳೂರು**